ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೩

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೈದನೇ ಅಧಿವೇಶನ

## ಗುರುವಾರ, ದಿನಾಂಕ: ೦೬ನೇ ಮಾರ್ಚ್, ೨೦೨೫

### ಸಮೂಹ – IV

೧. ಮುಖ್ಯಮಂತ್ರಿಗಳು

೨. ಉಪ ಮುಖ್ಯಮಂತ್ರಿಗಳು

೩. ಗೃಹ ಸಚಿವರು

೪. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

೫. ಅಬಕಾರಿ ಸಚಿವರು

೬. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

## ಸಿಎಲ್–೨ ಮತ್ತು ಸಿಎಲ್–೯ ಸನ್ನದುಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೩೧ (೨೫೬) ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಎಲ್–೭ ಸನ್ನದುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಸ್ಥಗಿತಗೊಂಡ ಸಿಎಲ್–೨, ಸಿಎಲ್–೯, ಎಂಎಸ್ಐಎಲ್ ಸನ್ನದುಗಳು ಹಾಗೂ ಬಾಕಿ ಉಳಿದ ಕೋಟಾವನ್ನು ಹರಾಜು ಮಾಡುವ ಕುರಿತು ಸುದ್ದಿ ದಿನಪತ್ರಿಕೆಯಲ್ಲಿ ಮತ್ತು ಮಾಧ್ಯಮಗಳಲ್ಲಿ ವರದಿಯಾಗಿದ್ದು, ಈ ಚಿಂತನೆ ಸರ್ಕಾರಕ್ಕಿದೆಯೇ ; ಅವುಗಳ ಸಂಖ್ಯೆ ಎಷ್ಟು ;

(ಇ) ಈ ರೀತಿ ಬಾಕಿ ಉಳಿದ ಸಿಎಲ್–೨ ಸನ್ನದುಗಳು, ಸ್ಥಗಿತಗೊಂಡ ಸಿಎಲ್–೨, ಸಿಎಲ್–೯ ಸನ್ನದುಗಳು, ಸ್ಥಗಿತಗೊಂಡ ಮತ್ತು ಬಾಕಿ ಉಳಿದ ಎಂ.ಎಸ್.ಐ.ಎಲ್ ಕೋಟಾ ಎಷ್ಟು ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಈ) ೨೦೦೮–೦೯ ಸಾಲಿನಲ್ಲಿ ಸ್ಥಗಿತಗೊಂಡ ಸಿಎಲ್–೨ ಮತ್ತು ಸಿಎಲ್–೯ ಸನ್ನದುಗಳನ್ನು ಎಂ.ಎಸ್.ಐ.ಎಲ್ ಸಂಸ್ಥೆಗೆ ಹಸ್ತಾಂತರ ಮಾಡಿದ್ದು, ಮತ್ತೆ ಈಗ ಅಂತಹ ಸನ್ನದುಗಳನ್ನು ಹರಾಜು ಮಾಡಲು ಕಾನೂನಿನಲ್ಲಿ ಅವಕಾಶ ಇದೆಯೇ ;

(ಉ) ಇಂತಹ ಸ್ಥಗಿತಗೊಂಡ ಸನ್ನದುಗಳನ್ನು ಹರಾಜು ಮಾಡುವುದರಿಂದ ಆಗುವ ಸಾಧಕ–ಬಾಧಕಗಳು ಹಾಗೂ ಅನ್ಯ ರಾಜ್ಯಗಳ ಆರ್ಥಿಕ ಮತ್ತು ಇನ್ನಿತರ ವಲಯಗಳ ಮೇಲಾದ ಪ್ರಭಾವದ ಕುರಿತು ಅಧ್ಯಯನ ಮಾಡಲಾಗಿದೆಯೇ ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದ ನಗರ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟು ಅವಧಿಯನ್ನು ವಿಸ್ತರಿಸುವ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩.೨ (೨೩೯) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಬೃಹತ್ ಮತ್ತು ಇತರ ನಗರ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟು ಅವಧಿಯನ್ನು ನಿಗದಿಪಡಿಸಲಾಗಿದೆಯೇ ; ನಿಗದಿಪಡಿಸಲಾಗಿದ್ದರೆ, ಯಾವ ಯಾವ ನಗರಗಳಲ್ಲಿ ಗರಿಷ್ಠ ಎಷ್ಟು ಸಮಯದವರೆಗೆ ವ್ಯಾಪಾರ ವಹಿವಾಟು ನಡೆಸಬಹುದು ; (ಎಷ್ಟು ಗಂಟೆಯಿಂದ ಎಷ್ಟು ಗಂಟೆಗಳವರೆಗೆ ಎಂಬ ಮಾಹಿತಿ ಸಹಿತ ವಿವರ ನೀಡುವುದು)

(ಆ) ಈಗಾಗಲೇ ಸರ್ಕಾರ ನಿಗದಿಪಡಿಸಿರುವ ವ್ಯಾಪಾರ ವಹಿವಾಟು ಅವಧಿಯ (duration) ಮಾನದಂಡಗಳು ರಾಜ್ಯದ ಸಣ್ಣ ನಗರಗಳಿಗೆ ಅನ್ವಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಈ ನಿಯಮಗಳನ್ನು ಗೃಹ ಇಲಾಖೆ ಮಾರ್ಪಡಿಸಲು ವಹಿಸಲಾದ ಕ್ರಮಗಳೇನು ;

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ದೇವಸ್ಥಾನ ಸಂಬಂಧಿತ (ಟೆಂಪಲ್ ಟೂರಿಸಂ) ಹಾಗೂ ಇತರ ಪ್ರವಾಸೋದ್ಯಮ ಅವಕಾಶಗಳ ಹಿನ್ನೆಲೆಯಲ್ಲಿ ಸಾರ್ವಜನಿಕ ಸಾರಿಗೆ ಸಹಿತ ವ್ಯಾಪಾರ ವಹಿವಾಟು ಅವಧಿಯನ್ನು ವಿಸ್ತರಿಸುವ ಬಗ್ಗೆ ಗೃಹ ಇಲಾಖೆ ಸಂಬಂಧಪಟ್ಟ ಇತರ ಇಲಾಖೆಗಳೊಂದಿಗೆ ಸಮಾಲೋಚನೆ ನಡೆಸಿದೆಯೇ ;

(ಈ) ಸದರಿ ಜಿಲ್ಲೆಗಳಲ್ಲಿ ಸುರಕ್ಷತೆ, ಭದ್ರತೆ ಹಾಗೂ ಕಾನೂನು ಸುವ್ಯವಸ್ಥೆ ನೆಪದಲ್ಲಿ ನಿಗದಿತ ಅವಧಿಯ ನಂತರ ವ್ಯಾಪಾರ ವಹಿವಾಟುಗಳನ್ನು ಪೊಲೀಸರು ಬಲವಂತವಾಗಿ ಬಂದ್ ಮಾಡಿಸುತ್ತಿರುವ ಬಗ್ಗೆ ವ್ಯಾಪಾರೋದ್ಯಮಿಗಳು, ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳು ನೀಡಿದ ಮನವಿಗಳ ಕುರಿತು ಸರ್ಕಾರ ಯಾವ ರೀತಿ ಕ್ರಮವಹಿಸುತ್ತಿದೆ ?

## ಬೆಳಗಾವಿ ಜಿಲ್ಲೆ ಕಾಗವಾಡ ತಾಲ್ಲೂಕಿನ ಐನಾಪುರ ಏತ ನೀರಾವರಿ ಯೋಜನೆಗಾಗಿ ಜಮೀನುಗಳನ್ನು ಕಳೆದುಕೊಂಡಿರುವ ರೈತರಿಗೆ ಭೂ ಪರಿಹಾರ ನೀಡದಿರುವ ಬಗ್ಗೆ

**ಡಾ: ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) –**

೩೩ (೩೨೨) ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆ ಕಾಗವಾಡ ತಾಲ್ಲೂಕಿನ ಮಂಗಸೂಳಿ ಗ್ರಾಮದ ಭೂಮಿಗಳನ್ನು ಐನಾಪುರ ಏತ ನೀರಾವರಿ ಕಾಮಗಾರಿಗೆ ಭೂಸ್ವಾಧೀನ ಪಡಿಸಿಕೊಂಡಿದ್ದು, ರೈತರಿಗೆ ಇದುವರೆವಿಗೂ ಭೂ ಪರಿಹಾರ ಧನ ನೀಡದಿರಲು ಕಾರಣವೇನು ;

(ಆ) ಐನಾಪುರ ಏತ ನೀರಾವರಿ ಯೋಜನೆಯ ಎರಡನೇ ಹಂತದ ಪೂರ್ವ ಕಾಲುವೆ ನಿರ್ಮಾಣಕ್ಕೆ ಮಂಗಸೂಳಿ ಗ್ರಾಮದ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಂಡಿದ್ದು ಯಾವಾಗ ; ಭೂ ಪರಿಹಾರಧನ ನೀಡದಿರುವುದರಿಂದ ರೈತರು ಸಂಕಷ್ಟಕ್ಕೀಡಾಗಿ ಧರಣಿ ಸತ್ಯಾಗ್ರಹ ನಡೆಸಲು ಮುಂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ರೈತರಿಗೆ ಭೂ ಪರಿಹಾರಧನವನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು ?

## ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಏಕರೂಪ ಟಿಕೆಟ್ ದರ ನಿಗದಿಪಡಿಸುವ ಬಗ್ಗೆ

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೩೪ (೨೬೩) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿರುವ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳ ಸಂಖ್ಯೆಯೆಷ್ಟು ; ಹಾಗೂ ಕಳೆದ ಮೂರು ವರ್ಷದಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು ; (ಚಿತ್ರಮಂದಿರಗಳವಾರು ಮಾಹಿತಿ ಒದಗಿಸುವುದು)

(ಆ) ಈ ಚಿತ್ರಮಂದಿರಗಳಿಗೆ ಟಿಕೆಟ್ ದರಗಳನ್ನು ನಿಗದಿ ಮಾಡುವ ಅಧಿಕಾರ ಯಾರಿಗೆ ಇದೆ ; ಪ್ರತಿ ಚಿತ್ರಮಂದಿರದಲ್ಲಿ ಒಂದೊಂದು ಟಿಕೆಟ್ ದರಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದರೆ, ಏಕರೂಪ ಟಿಕೆಟ್ ದರವನ್ನು ನಿಗದಿಪಡಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು ; ಕರ್ನಾಟಕದಲ್ಲಿ ಅನ್ಯ ಭಾಷಾ ಸಿನಿಮಾಗಳು ಬಿಡುಗಡೆಯಾದರೆ ೫೦೦ ರೂ.ಗಳಿಂದ ೧೫೦೦ ರೂಪಾಯಿಗೆ ಹೆಚ್ಚು ಮಾಡಲಾಗುತ್ತಿದ್ದು, ಇದರಿಂದ ಯಾರಿಗೆ ಅನುಕೂಲವಾಗುತ್ತದೆ ;

(ಈ) ಕನ್ನಡ ಚಿತ್ರಗಳಿಗೂ ಸಹ ೫೦೦ ರೂ.ನಿಂದ ೧೦೦೦ ರೂ.ಗಳವರೆಗೂ ಟಿಕೆಟ್ ದರ ನಿಗದಿಪಡಿಸಿದರೆ, ಕನ್ನಡ ಚಿತ್ರಗಳಿಗೆ ಪ್ರೋತ್ಸಾಹ ನೀಡುವವರು ಯಾರು ; ಕನ್ನಡ ಚಿತ್ರಗಳಿಗೆ ಮಲ್ಟಿಪ್ಲೆಕ್ಸ್ ಚಿತ್ರಮಂದಿರದಲ್ಲಿ ಕನಿಷ್ಠ ೧೦೦ ರೂ. ನಿಂದ ೧೫೦ ರೂ.ವರೆಗೂ ನಿಗದಿಪಡಿಸಲು ಸರ್ಕಾರದಿಂದ ಆದೇಶ ಹೊರಡಿಸಲು ಇರುವ ತೊಂದರೆ ಏನು ;

(ಉ) ರಾಜ್ಯಕ್ಕೆ ಪರಭಾಷಾ ಚಿತ್ರಗಳಿಗೆ ಬೆಂಗಳೂರಿನಲ್ಲಿರುವ ಎಲ್ಲಾ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಪ್ರದರ್ಶನಕ್ಕೆ ಅನುಕೂಲ ಮಾಡಿಕೊಡಲಾಗುತ್ತಿದ್ದು, ಇದರಿಂದ ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳ ಕೊರತೆಯಿರುವುದನ್ನು ಸರ್ಕಾರ ಗಮನಿಸಿದೆಯೇ ; ಇದಕ್ಕೆ ಪರಿಹಾರ ಏನು?

## ಮಡಿಕೇರಿಯ ಕೊಡವ ಹೆರಿಟೇಜ್ ಕಾಮಗಾರಿಯ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೩೫ (೨೮೫) ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಕೊಡವ ಹೆರಿಟೇಜ್ ಕೇಂದ್ರ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ ;

(ಆ) ಈ ಹೆರಿಟೇಜ್ ಕೇಂದ್ರದ ಕಾಮಗಾರಿಗೆ ಒಟ್ಟು ಮೀಸಲಿರಿಸಿದ ಅನುದಾನ ಎಷ್ಟು ;

(ಇ) ಸದರಿ ಕಾಮಗಾರಿ ಯಾವ ಹಂತದಲ್ಲಿದೆ ; ಕಾಮಗಾರಿ ವಿಳಂಬವಾಗಲು ಕಾರಣವೇನು ;

(ಈ) ಕೊಡವ ಹೆರಿಟೇಜ್ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಪೂರ್ಣಗೊಳಿಸಲು ಅವಶ್ಯವಿರುವ ೪೯೫.೦೦ ಲಕ್ಷಗಳ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಲು ಆರ್ಥಿಕ ಇಲಾಖೆ ಸಹಮತಿ ನೀಡದೆ ಇರಲು ಕಾರಣವೇನು ;

(ಉ) ಹೆಚ್ಚುವರಿ ಅನುದಾನವನ್ನು ಶೀಘ್ರ ಬಿಡುಗಡೆಗೊಳಿಸಿ ಕಾಮಗಾರಿಯನ್ನು ಪೂರ್ಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿನ ಕಾನೂನು ಸುವ್ಯವಸ್ಥೆಯ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ ) –**

೩೬ (೨೬೬) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಹಾಗೂ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಹಲವು ಕಿಡಿಗೇಡಿಗಳು ಮತ್ತು ದರೋಡೆಕೋರರಿಂದ ಕಾನೂನು ಸುವ್ಯವಸ್ಥೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ವೀಲ್ಹಿಂಗ್ ಹಾಗೂ ಎಷ್ಟೋ ಕಿಡಿಗೇಡಿಗಳು, ದರೋಡೆಕೋರರು ಕೈನಲ್ಲಿ ಚಾಕು, ಚೂರಿ, ಲಾಂಗ್‌ಗಳನ್ನು ಹಿಡಿದುಕೊಂಡು ಓಡಾಡುತ್ತಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು ; ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ಕರ್ತವ್ಯ ಲೋಪವನ್ನು ಗಮನಿಸಲಾಗಿದೆಯೇ ;

(ಇ) ಕಾನೂನು ಸುವ್ಯವಸ್ಥೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ರೀತಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಿದೆ ?

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ದೊರೆಯದಿರುವ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ ) –**

೩೭ (೨೮೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಪ್ರವೇಶ ದೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ೨೦೨೪–೨೫ನೇ ಸಾಲಿನಲ್ಲಿ ಎಷ್ಟು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ ದೊರೆತಿರುವುದಿಲ್ಲ ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ವಿದ್ಯಾರ್ಥಿ ನಿಲಯದ ಪ್ರವೇಶ ಸೌಲಭ್ಯ ದೊರೆಯದೆ ಇರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚಕ್ಕಾಗಿ ಪ್ರತಿ ತಿಂಗಳು ನೀಡುತ್ತಿರುವ ದರವು ಸಾಕಾಗುತ್ತದೆಯೇ ; ಇಲ್ಲದಿದ್ದಲ್ಲಿ, ದರವನ್ನು ಪರಿಷ್ಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ಕೆ.ಪಿ.ಎಸ್.ಸಿ. ನಡೆಸುತ್ತಿರುವ ಪರೀಕ್ಷೆಗಳಲ್ಲಿ ಆಗುತ್ತಿರುವ ಗೊಂದಲಗಳ ಕುರಿತು

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ ) –**

೩೮ (೨೭೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆ.ಪಿ.ಎಸ್.ಸಿ. ಮೂಲಕ ನಡೆದ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳಿಗೆ ನಡೆಸಿದ ಪೂರ್ವಭಾವಿ ಪರೀಕ್ಷೆ ಮತ್ತು ಮರು ಪರೀಕ್ಷೆಗಳೆರಡರಲ್ಲೂ ಪ್ರಶ್ನೆಪತ್ರಿಕೆಗಳಲ್ಲಿ ದೋಷಗಳು ಕಂಡು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಭಾಷಾಂತರದ ಎಡವಟ್ಟಿನಿಂದ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಆಗಿರುವ ಅನ್ಯಾಯ ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ;

(ಇ) ಸಾಹಿತಿಗಳು, ಚಿಂತಕರು, ವಿದ್ಯಾರ್ಥಿ ಸಂಘಟನೆಗಳು ಮತ್ತೊಮ್ಮೆ ಪೂರ್ವಭಾವಿ ಪರೀಕ್ಷೆ ನಡೆಸಲು ಒತ್ತಾಯಿಸುತ್ತಿರುವುದರ ಕುರಿತು ಸರ್ಕಾರದ ನಿಲುವೇನು ;

(ಈ) ಕಳೆದ ೧೦ ವರ್ಷಗಳಲ್ಲಿ ಕೆ.ಪಿ.ಎಸ್.ಸಿ.ಯು ನಡೆಸಿದ ಪರೀಕ್ಷೆಗಳಲ್ಲಿ ಆಗಿರುವ ವಂಚನೆ, ಅವ್ಯವಹಾರ, ದೋಷಪೂರಿತ ಪ್ರಕರಣಗಳು ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಕೆ.ಪಿ.ಎಸ್.ಸಿ.ಯಲ್ಲಿ ಸುಧಾರಣೆ ತರಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಮಾತಾ ಮಾಣಿಕೇಶ್ವರಿ ದೇವಸ್ಥಾನದ ಅಭಿವೃದ್ಧಿ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೩೯ (೩೧೫) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಾತಾ ಮಾಣಿಕೇಶ್ವರಿ ದೇವಸ್ಥಾನ ಗುರುಮಿಠ್‌ಕಲ್ಲಿನ ಯಾಣಗುಂದಿಯಲ್ಲಿ ಪ್ರಸಿದ್ಧವಾಗಿದ್ದು, ಮಾತಾ ಮಾಣಿಕೇಶ್ವರಿಯವರು ೯೭ ವರ್ಷಗಳ ಕಾಲ ಅನ್ನ ನೀರಿಲ್ಲದೆ ಬಾಳಿ ಬದುಕಿ ಮಾತೆಯವರು ವರ್ಷಕ್ಕೆ ಒಂದೇ ದಿನ ಅದರಲ್ಲೂ ಶಿವರಾತ್ರಿ ದಿನ ಭಕ್ತರಿಗೆ ದರ್ಶನ ಕೊಡುತ್ತಿದ್ದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಒಂದೇ ದಿನ ಯಾಣಗುಂದಿಯಲ್ಲೆ ಇದ್ದು, ಶ್ರೀಶೈಲ, ಯಾಣಗುಂದಿಯಲ್ಲಿ ಇವರು ದರ್ಶನ ನೀಡುತ್ತಿದ್ದ ಮಾತೆ ಶಕ್ತಿ ಸ್ವರೂಪಿಣಿಯವರು ದೈವಾಧೀನರಾಗಿ ೨–೩ ವರ್ಷ ಕಳೆದರೂ ಇಂತಹ ಮಹಾತ್ಮರ ದೇವಸ್ಥಾನ ಇನ್ನೂ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿ ಆಗದೆ ಇರುವುದು ನಿಜವೇ ;

(ಇ) ಈ ದೇವಸ್ಥಾನ ಬೆಣ್ಣೆತೋರಾ ಡ್ಯಾಂನಿಂದ ೨ ಕಿ.ಮೀ. ಹತ್ತಿರದಲ್ಲಿದ್ದು, ಇದರ ಅಭಿವೃದ್ಧಿಯನ್ನು ಪ್ರವಾಸೋದ್ಯಮ ಇಲಾಖೆ ವತಿಯಿಂದ ನಿರ್ವಹಿಸಿ ಇದೊಂದು ಆಕರ್ಷಣೀಯ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುವುದೆ ?

## ಪ್ರಸಾದಮ್ ಯೋಜನೆಯ ಅನುದಾನದ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೪೦ (೨೭೯) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಾವ ಯಾವ ದೇವಸ್ಥಾನಗಳಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಕೇಂದ್ರ ಪ್ರವಾಸೋದ್ಯಮ ಇಲಾಖೆಯ ಪ್ರಸಾದಮ್ ಯೋಜನೆಯಡಿಯಲ್ಲಿ ಭರಿಸಲು ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ;

(ಆ) ಬಾಕಿ ಇರುವ ಪ್ರಸ್ತಾವನೆಗಳನ್ನು ಯಾವಾಗ ಕೇಂದ್ರಕ್ಕೆ ಸಲ್ಲಿಸಲಾಗುವುದು ; ಎಷ್ಟು ; ಯಾವ ಮತ್ತು ಯಾವೆಲ್ಲ ದೇವಸ್ಥಾನಗಳಿಗೆ ಅನುದಾನ ಪ್ರಸ್ತಾವನೆ ಸಲ್ಲಿಸಲಾಗುವುದು ; (ದೇವಸ್ಥಾನವಾರು ವಿವರ ನೀಡುವುದು)

(ಇ) ರಾಜ್ಯದ ಯಾವ ಯಾವ ಜಿಲ್ಲೆಗಳಿಂದ ಈ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆ ಬಂದಿದೆ ; ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸದೇ ಇರುವುದಕ್ಕೆ ಕಾರಣವೇನು ; (ವಿವರ ನೀಡುವುದು)

(ಈ) ಪ್ರಸಾದಮ್ ಯೋಜನೆಯಡಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿದೆ ; ಇದಕ್ಕೆ ಇರುವ ಮಾನದಂಡಗಳೇನು? (ವಿವರ ನೀಡುವುದು)

## ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಳ್ಳಬೇಕಾದ ಅಂತರ್ಜಲ ಅಭಿವೃದ್ಧಿಯ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೪೧ (೨೯೭) ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಣ್ಣ ನೀರಾವರಿ ಇಲಾಖೆಯಿಂದ ಅಂತರ್ಜಲ ಅಭಿವೃದ್ಧಿಗೆ ಕೈಗೊಂಡ ಕ್ರಮಗಳೇನು ; (ವಿವರ ಒದಗಿಸುವುದು)

(ಆ) ಕಳೆದ ೨ ವರ್ಷಗಳಲ್ಲಿ ಎಷ್ಟು ಚೆಕ್ ಡ್ಯಾಮ್ ಗಳನ್ನು ನಿರ್ಮಾಣ ಮಾಡಲಾಗಿದೆ ಮತ್ತು ಸದರಿ ಚೆಕ್ ಡ್ಯಾಮ್ ಗಳಲ್ಲಿ ಸಂಗ್ರಹಿಸಲಾಗುತ್ತಿರುವ ನೀರಿನ ಪ್ರಮಾಣ ಎಷ್ಟು ; (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಸಣ್ಣ ನೀರಾವರಿ ಇಲಾಖೆಯಿಂದ ಗುತ್ತಿಗೆದಾರರಿಗೆ ಪಾವತಿಸಲು ಬಾಕಿ ಇರುವ ಮೊತ್ತವೆಷ್ಟು ? (ವಿವರ ಒದಗಿಸುವುದು)

## ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನ ಕುರಿತು

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೪೨ (೨೭೪+೨೨೩) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಜಲಾಶಯ ಹಿನ್ನೀರಿನಲ್ಲಿ ಮುಳುಗಡೆಯಾಗುವ ೭೫ ಸಾವಿರ ಎಕರೆ ಭೂಮಿ ಮತ್ತು ೨೦ ಹಳ್ಳಿಗಳ ಕಟ್ಟಡಗಳ ಭೂ ಸ್ವಾಧೀನ ಪ್ರಕ್ರಿಯೆ ಬಾಕಿ ಉಳಿದಿರುವುದು ನಿಜವೇ ;

(ಆ) ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಬಾಧಿತರಾಗುವ ಭೂ ಮಾಲೀಕರು ಬಾಗಲಕೋಟೆ ಜಿಲ್ಲಾಧಿಕಾರಿ ಕಚೇರಿ ಎದುರುಗಡೆ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಆಗ್ರಹಿಸಿ ಅಹೋರಾತ್ರಿ ಸತ್ಯಾಗ್ರಹ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸರ್ಕಾರವು ಡಿಸೆಂಬರ್ ತಿಂಗಳಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಚಿವರು ಯೋಜನಾ ವ್ಯಾಪ್ತಿಯಲ್ಲಿ ಬರುವ ಚುನಾಯಿತ ಪ್ರತಿನಿಧಿಗಳು ಹಾಗೂ ಯೋಜನಾ ವ್ಯಾಪ್ತಿಯ ಭೂ ಮಾಲೀಕರ ನಿಯೋಗದೊಂದಿಗೆ ಬೆಳಗಾವಿಯಲ್ಲಿ ನಡೆದ ಸಭೆಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆ

ಪೂರ್ಣಗೊಳಿಸುವಂತೆ ತೀರ್ಮಾನಿಸಿದ್ದು ಸರ್ಕಾರವು ಅಲ್ಲಿಂದ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮಗಳೇನು ?

## ಬಿ.ಬಿ.ಎಂ.ಪಿ.ಯ ನಗರದ ಸಮಗ್ರ ಸಂಚಾರಿ ಸುಧಾರಣೆ ಯೋಜನೆ ಕುರಿತು

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) –**

೪೩ (೨೩೩) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರೂ. ೫೪೯೬೪.೦೦ ಕೋಟಿ ಅಂದಾಜು ವೆಚ್ಚದ ನಗರದ ಸಮಗ್ರ ಸಂಚಾರಿ ಸುಧಾರಣೆ ಯೋಜನೆಯಡಿ ೪೨ ಕಿ.ಮೀ ಉದ್ದದ ಎತ್ತರಿಸಿದ ರಸ್ತೆ ಹಾಗೂ ಡಬ್ಬಲ್ ಡೆಕ್ಕರ್ ರಸ್ತೆ ಒಳಗೊಂಡಂತೆ ಸುಮಾರು ೨೦ ರಸ್ತೆ ಸಂಚಾರ ಮೂಲಸೌಕರ್ಯ ಯೋಜನೆಗಳು ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿಲಾಗಿದೆ ಎಂದು ಮಾಧ್ಯಮ ವರದಿಗಳು ಪ್ರಕಟಣೆ ಮಾಡಿದ್ದು ಈ ಎಲ್ಲಾ ಯೋಜನೆಗಳ ಪ್ರಸ್ತುತ ಸ್ಥಿತಿಗತಿ ಕುರಿತಂತೆ ಮಾಹಿತಿ ನೀಡುವುದು ;

(ಆ) ಈ ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಹಣಕಾಸು ವ್ಯವಸ್ಥೆ ಕುರಿತಂತೆ ಸರ್ಕಾರದ ಯೋಜನೆಯೇನು ; (ಮಾಹಿತಿ ನೀಡುವುದು)

(ಇ) ಬಿ.ಬಿ.ಎಂ.ಪಿ ಯ ಈ ಪ್ರಸ್ತಾವಿತ ಯೋಜನೆಗಳು ಉದ್ದೇಶಿತ ಸಂಚಾರ ಸುಧಾರಣೆ ಬದಲಾಗಿ ಅನೇಕ ಪ್ರತಿಕೂಲ ಪರಿಣಾಮ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಉಂಟಾಗುವ ವರ್ಷಗಟ್ಟಲೆ ಅವಧಿಯ ವಿಳಂಬ ಮತ್ತು ಕಾಮಗಾರಿ ವೆಚ್ಚ ನಿರೀಕ್ಷಿತ ಉದ್ದೇಶ ಪೂರೈಸುವ ಸಾಧ್ಯತೆ ಇಲ್ಲದಿರುವ ಕಾರಣ

ನಾಗರಿಕರ ಮೇಲೆ ಅಗಾಧ ಹಾಗೂ ಅನಗತ್ಯ ಹೊರೆ ಕುರಿತಂತೆ ಪೂರ್ಣ ಮಾಹಿತಿ ನೀಡುವುದು ;

(ಈ) ಸುರಂಗ ರಸ್ತೆ ವ್ಯವಸ್ಥೆಯು ಸಂಚಾರ ಸಮಯವನ್ನು ಕಡಿಮೆಗೊಳಿಸಿ ಸುರಂಗದ ಪ್ರವೇಶ ಹಾಗೂ ನಿರ್ಗಮನ ಪ್ರದೇಶಗಳಲ್ಲಿ ಉಂಟಾಗುವ ಅತೀವ ವಾಹನ ದಟ್ಟಣೆ ಈ ಸಂಚಾರ ಸಮಯದ ಉಳಿಕೆಯನ್ನು ನಿರರ್ಥಕಗೊಳಿಸುವುದಿಲ್ಲವೇ ;

(ಉ) ಈ ಎಲ್ಲಾ ಕಾಮಗಾರಿಗಳಿಗೆ ಅವಶ್ಯವಿರುವ ಜಮೀನು ವಶ ಪಡೆಯಲು ಇರುವ ಅನಾನುಕೂಲತೆಗಳೇನು; ಇನ್ನಿತರ ಮಹತ್ವದ ಅಂಶಗಳ ಕುರಿತಂತೆ ಸಿವಿಲ್ ಸೊಸೈಟಿ ನಡೆಸಿರುವ ವಿಚಾರ ಸಂಕಿರಣದಲ್ಲಿ ಭಾರತೀಯ ವಿದ್ಯಾಸಂಸ್ಥೆಯ ರಸ್ತೆ ಸಂಚಾರ ತಜ್ಞ ಶ್ರೀ ಅಶೀಶ್ ವರ್ಮ ಅವರನ್ನೊಳಗೊಂಡಂತೆ ಅನೇಕ ತಜ್ಞರ ಅಭಿಪ್ರಾಯ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸದರಿ ಅಂಶಗಳ ಗಂಭೀರ ಪರಿಣಾಮಗಳ ನಿವಾರಣೆಗೆ ಕುರಿತಂತೆ ಸರ್ಕಾರ ಕೈಗೊಂಡಿರುವ ಕಾರ್ಯ ಯೋಜನೆ ಕುರಿತು ವಿವರ ಒದಗಿಸುವುದು ?

## ಬೆಳ್ತಂಗಡಿ ನ್ಯಾಯಾಲಯ ಸಂಕೀರ್ಣ ಕಟ್ಟಡ ಕಾಮಗಾರಿಗೆ ಅನುದಾನ ನೀಡುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) –**

೪೪ (೨೫೧) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿನ ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣ ಹಾಗೂ ಪೀಠೋಪಕರಣಗಳ ಪೂರೈಕೆಗೆ ಕಾಮಗಾರಿಗೆ

ರೂ. ೧೩.೯೨ ಕೋಟಿ ಅನುದಾನವನ್ನು ಮಂಜೂರು ಮಾಡುವಂತೆ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕೋರಿಕೆಗನುಗುಣವಾಗಿ ಅನುದಾನವನ್ನು ಮಂಜೂರು ಮಾಡಿ ಬಿಡುಗಡೆ ಮಾಡುವ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ ;

(ಇ) ಯಾವ ಕಾಲಮಿತಿಯೊಳಗೆ ಸದರಿ ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣ ಹಾಗೂ ಪೀಠೋಪಕರಣಗಳ ಪೂರೈಕೆ ಕಾಮಗಾರಿಗೆ ರೂ. ೧೩.೯೨ ಕೋಟಿ ಅನುದಾನವನ್ನು ಮಂಜೂರು ಮಾಡಿ ಬಿಡುಗಡೆಗೊಳಿಸಲಾಗುವುದು ?

## ನೀರು ಬಳಕೆದಾರರ ಸಹಕಾರ ಸಂಘಗಳ ಶೃಂಗ ಮಟ್ಟದ (ಅಪೆಕ್ಸ್) ಒಕ್ಕೂಟ ರಚನೆ ಬಗ್ಗೆ

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ ) –**

೪೫ (೨೧೫) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೀರು ಬಳಕೆದಾರರ ಸಹಕಾರ ಸಂಘಗಳ ಶೃಂಗ ಮಟ್ಟದ (ಅಪೆಕ್ಸ್) ಒಕ್ಕೂಟ ರಚಿಸುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಆ) ಕಾರ್ಯನಿರತ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಪ್ರಸ್ತುತ ಒದಗಿಸುತ್ತಿರುವ ರೂ. ೧.೦೦ ಲಕ್ಷಗಳ ವಾರ್ಷಿಕ ಕಾರ್ಯಾನುದಾನ ಮತ್ತು ಏಕಕಾಲಿಕ ನಿರ್ವಹಣಾ ಅನುದಾನವನ್ನು ಪರಿಷ್ಕರಿಸಿ ಹೆಚ್ಚಿಸುವ ಸಂಬಂಧ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದ್ದ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಇ) ಸರ್ಕಾರವು ಹಾರಂಗಿ, ಕಬಿನಿ, ಮಲಪ್ರಭ ಮತ್ತು ಘಟಪ್ರಭಗಳ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳಿಗಳಿಗೆ ಭದ್ರತಾ ಠೇವಣಿ ನೀಡಿರುವಂತೆ ಉಳಿದ ಮಹಾಮಂಡಳಿಗಳಿಗೆ ಭದ್ರತಾ ಠೇವಣಿ ನೀಡುವ ಕುರಿತು ಸರ್ಕಾರದ ನಿಲುವೇನು ;

(ಈ) ನೀರು ಬಳಕೆದಾರರ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬರುವ ನಿರ್ವಹಣಾ ಕಾಮಗಾರಿಗಳನ್ನು ಸಂಘಗಳಿಗೆ ವಹಿಸುವ ವಿಚಾರವಾಗಿ ಸರ್ಕಾರ ಈಗಾಗಲೇ ಆದೇಶ (ಆದೇಶ ಸಂಖ್ಯೆ:೪೬ ಸಿಎಎ ೨೦೧೯, ದಿನಾಂಕ:೧೭.೦೮.೨೦೧೯) ಹೊರಡಿಸಿದ್ದರೂ ಎಷ್ಟು ಮೊತ್ತದವರೆಗೆ ಯಾವ ಹಂತದ ಅಧಿಕಾರಿ ಆದೇಶ ನೀಡಬಹುದು ಎಂಬುವುದಕ್ಕೆ ಸ್ಪಷ್ಟತೆ ಇರುವುದಿಲ್ಲ ; ಹಾಗಾಗಿ, ಈ ಸಂಬಂಧ ವಿವಿಧ ಹಂತದ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಿ ಆದೇಶ ಹೊರಡಿಸಬಹುದಲ್ಲವೇ ;

(ಉ) ನಿಗಮದ ವ್ಯಾಪ್ತಿಯಲ್ಲಿರುವ ೫೦ ಎಕರೆ ಕಡಿಮೆ ವಿಸ್ತೀರ್ಣದ ಕೆರೆ, ಕಟ್ಟೆ, ಕುಂಟೆಗಳಲ್ಲಿ ಮೀನು ಸಾಕಾಣಿಕೆ ಮತ್ತು ಹಿಡಿಯುವಿಕೆಯನ್ನು ಪುನ: ಕಾರ್ಯನಿರತ ನೀರು ಬಳಕೆದಾರರ ಸಂಘಗಳಿಗೆ/ಮಹಾಮಂಡಳಿಗಳಿಗೆ ವಹಿಸುವ ಕುರಿತು ಸರ್ಕಾರ ತನ್ನ ನಿರ್ಧಾರವನ್ನು ಪುನರ್ ಪರಿಶೀಲಿಸಬಹುದಲ್ಲವೇ ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ 832 – ಪಿ2

**List of Questions for Oral Answers**

**Total No. of Questions - 15**

# LIST - 3

# KARNATAKA LEGISLATIVE COUNCIL

## ONE HUNDRED AND FIFTY FIFTH SESSION

## Thursday, the 6th March, 2025

---

### GROUP - IV

1. Chief Minister
2. Deputy Chief Minister
3. Minister for Home
4. Minister for Law, Parliamentary Affairs and Legislation and Tourism
5. Minister for Excise
6. Minister for Minor Irrigation, Science and Technology

---

### REGARDING CL-2 AND CL-9 LICENCES

**Sri Sunil Vallyapur (Elected by Legislative Assembly) -**

31 (256) Will the Minister for Excise be pleased to state:-

a) the number of CL-7 licences which have been functioning in the State at present ; (districtwise and talukwise information be furnished)

b) the news has been reported in newspapers and medias that the defunct CL-2, CL-9, MSIL licences and the remaining quota are mulling to auctioning in the State, whether the Government has contemplated in this regard ; the number thereof ;

c) the number of remaining CL-2 licences, defunct CL-2, CL-9 licences, defunct and remaining M.S.I.L quota licences ; (districtwise and talukwise information be furnished)

d) the defunct CL-2 and CL-9 licences have been handed over to MSIL during the year 2008-09, whether there is a provision in the law for mulling to auctioning again such licences ;

e) whether the study has been conducted with regard to the pros and cons that will be caused due to the auctioning of such defunct licences and the impact on the economic and other sectors of other States ? (complete information be furnished)

**EXTENTION OF DURATION OF BUSINESS TRANSACTION IN URBAN AREAS OF THE STATE**

**Sri Manjunatha Bhandari (Local Authorities Constituency) -**

32 (239) Will the Minister for Home be pleased to state:-

a) whether the duration of business transaction has been specified in Bruhat and other urban areas of the State; if so, the particulars of cities in which and the maximum time for which the business transaction would be carried out ; (the details along with the information of schedule be furnished)

b) the steps taken by the Home Department to modify these rules as it has come to the notice of the Government that the criterias of duration of business transaction that have been specified by the Government already are not applicable for small cities of the State ;

c) whether the Home Department has consulted with other department concerned with regard to extending the duration of business transaction along with public transport in view of making provision for temple and other tourism in Dakshina Kannada and Udupi districts ;

d) the manner in which the steps is being taken by the Government regarding the requisitions that have being received by the businessmen, public and representatives regarding the business transactions are being closed forcibly by the police after specified duration in the pre-text of safety, security and law and order in the said districts ?

**NOT PROVIDING LAND COMPENSATION TO FARMERS**

**Dr. M.G.Muley (Elected by Legislative Assembly) -**

33 (322) Will the Minister for Minor Irrigation, Science and Technology be pleased to state:-

a) the land of Mangasuli village in Kagavad taluk of Belagavi district have been acquired for Ainapur lift Irrigation Project, the reasons for not providing land compensation for farmers till date ;

b) the date on which the lands of Mangasuli village have been acquired for the construction of the east canal of the second stage of the Ainapur Lift Irrigation Project ; whether it has come to the notice of the Government that the farmers have come forward to stage dharanas and protest as they are distressed due to not providing land compensation ;

c) the timelimit within which the land compensation would be provided for these farmers ?

**FIXATION OF UNIFORM TICKET RATE AT MULTIPLEXES**

**Sri Govinda Raju (Elected by Legislative Assembly) -**

34 (263) Will the Minister for Home be pleased to state:-

a) the total number of multiplexes in Benguluru city and the revenue that has been acrued to the exchequer of the Government during the last 3 years ; (multiplexwise information be furnished)

b) the authority which have the power to fix the ticket rates for these multiplexes ; whether it has come to the notice of the Government that there are various ticket rates in each multiplex ;

c) if so, the prevailing impediment to the Government to fix the uniform ticket rate ;

d) if other language cinemas are released in Karnataka the ticket rate is being increased from Rs.500 to Rs.1500, details of the persons whom will get the benefit from the same ;

e) if the ticket rate has been increased from Rs.500 to Rs.1000 even for kannada cinemas, the people who will encourage the same ; the prevailing impediment to issue the order by the Government to fix the ticket rate from minimum Rs.100 to Rs.150 for kannada cinemas in multiplexes ;

f) since the facility is being provided for the screening of other language cinemas in the State particularly in all multiplexes of Bengaluru, whether the Government has noticed that there are shortage of multiplexes for kannada cinemas there of; the solution there of ?

**WORK OF KODAVA HERITAGE CENTRE IN MADIKERI**

**Sri Kushalappa M.P. (suja) (Local Authorities Constituency) -**

35 (285) Will the Minister for Law, Parlimentary Affairs and Legislation and Tourism be pleased to state:-

a) the date on which the work of kodava heritage centre in Madikeri of Kodagu district has been commenced ;

b) the total grant that has been earmarked for the work of this heritage centre ;

c) the present stage of the said work; the reasons for the delay of the work ;

d) the reasons for not according the consent from the Finance Department to sanction additional grant of Rs.495.00 lakhs which is required to complete the work of kodava heritage in full pledged manner ;

e) whether the proposal is before the Government to complete the work by releasing additional grant immediately ? (complete details be furnished)

## LAW AND ORDER IN THE STATE

**Sri S.L. Bhojegowda (Teachers' Constituency) -**

36 (266) Will the Minister for Home be pleased to state:-

a) whether it has come to the notice of the Government that Law and Order has been collapsed from various miscreants and robbers across the State and especially in Bengaluru city ;

b) if so, the reasons for not taken any action by the police eventhough the wheeling and the number of miscreants and robbers who are roaming with knife, dagger, longs in their hands ; whether the dereliction of duty of concerned police officers has been noticed ;

c) the manner in which the stringent actions would be taken by the Government to set right the Law and Order ?

## NON-AVAILABILITY OF ADMISSION FOR STUDENTS IN SC AND ST HOSTELS

**Sri D.T. Srinivas (D.T.S.) (Teachers' Constituency) -**

37 (280) Will the Chief Minister be pleased to state:-

a) whether it has come to the notice of the Government that there is non-availability of the admission in the hostels for the student belonging to scheduled category who are studying in various colleges of the State ;

b) if so, the number of students of scheduled tribes to whom the admission has not been availed in the hostel during the year 2024-25 ;

c) the steps taken by the Government for facilitating the students who were not availed the admission facility of hostel ;

d) whether the amount which is being provided every month for the expenses of food for the students has been sufficient ; if not, whether the proposal is before the Government to revise the price ?

## CONFUSION IN THE EXAMINATIONS CONDUCTED BY K.P.S.C

**Dr. Dhananjaya Sarji (Graduates' Constituency) -**

38 (273) Will the Chief Minister be pleased to state:-

a) whether it has come to the notice of the Government that the errors have been found in the question papers of both the preliminary examination and the re-examination that have been conducted by the K.P.S.C for the posts of Gazetted Probationers ;

b) whether it has come to the notice of the Government that the injustice has been caused to the kannada medium candidates due to the errors in translation; if so, the steps that would be taken by the Government to rectify the injustice that has been caused to them ;

c) the stand of the Government regarding the writers, thinkers and students organizations are urging to conduct re-examination for the same ;

d) the particulars of fraudulence, irregularity and defective cases that have been occurred in the examinations held by the K.P.S.C during the last 10 years ; (complete information be furnished)

e) the details of the steps taken by the Government for bringing the reforms in the K.P.S.C ?

**DEVELOPMENT OF MATA MANIKESHWARI TEMPLE**

**Sri Thippanappa Kamaknoor (Elected by Legislative Assembly) -**

39 (315) Will the Minister for Law, Parliamentary Affaris and Legislation and Tourism be pleased to state:-

a) the Mata Manikeshwari Temple is a famous in Yanagundi of Gurumitkal, Mata Manikeshwari survived for 97 years without food and water ; whether it has come to the notice of the Government about the fact that she allowed devotees for darshan for only one day in a year that is the day of shivaratri ;

b) shakti swaroopini mata stayed in Yanagundi and in the same day allowed devotees for darshan in Yanagundi and as well as srisailam, eventhough it has been 2-3 years since she passed away, whether it is true that temple for such mahatmas has not yet been developed as per the expectation ;

c) this temple is situated near 2 k.m. from the Bennithora dam, whether the step would be taken to develop the same as an attractive tourist spot by maintaining through the Tourism Department ?

**GRANT OF PRASADAM SCHEME**

**Sri Kishor Kumar Puttur (Local Authorities Constituency) -**

40 (279) Will the Minister for Law, Parliamentary Affairs and Legislation and Tourism be pleased to state:-

a) the details of the proposal that has been submitted to the Central Government from the State Government to bear the expenditure under Prasadam Scheme of Tourism Department of the Central Government for the development of infrastructure for various temples of Dakshina Kannada and Udupi districts ;

b) the date on which the pending proposals would be submitted to the Central Government ; the number and the particulars of temples for which the proposal would be submitted for the grant ; (templewise details be furnished)

c) the particulars of districts of the State from which the proposal has been received for seeking the grant under this scheme ; the reason for not submitting the proposal to the Central Government ; (details be furnished)

d) the provision that has been provided for taking up the various works under this scheme ; the prevailing criterias for the same ? (details be furnished)

**RECHARGE OF GROUND WATER BY THE MINOR IRRIGATION DEPARTMENT**

**Smt. Bharathi Shetty (Nominated) -**

41 (297) Will the Minister for Minor Irrigation, Science and Technology be pleased to state:-

a) the steps taken by the Minor Irrigation Department for the recharge of ground water ; (details be furnished)

b) the number of check dams that have been constructed during the last 2 years and the quantum of water that is being stored in the said check dams ; (districtwise details be furnished)

c) the outstanding amount that has to be paid for contractors by the Minor Irrigation Department ? (details be furnished)

**LAND ACQUISITION OF UPPER KRISHNA PROJECT**

**Sri P.H. Pujar (Local Authorities Constituency) -**

**Sri Nirani Hanamant Rudrappa (Graduates' Constituency) -**

42 (274+223) Will the Deputy Chief Minister be pleased to state:-

a) whether it is true that the process of land acquisition of 75000 acres of land and the buildings of 20 villages that would be submerged in the backwater of Alamatti Reservior under the upper krishna project remains pending ;

b) whether it has come to the notice of the Government that the land owners who have been affected by the backwater of Alamatti Reservior have staged a day and night protest infront of the office of Deputy Comissioner of Bagalkot for urging to complete the land acquisition process ;

c) the Government has decided to complete the land acquisition process in the meeting which has been held in Belagavi in the month of December with the Hon'ble Chief Minister and the Ministers and elected representatives and delegation of the land owners who are coming in the limits of the project, the steps taken by the Government until now ?

## COMPREHENSIVE TRAFFIC AND REFORMS PLAN OF B.B.M.P

**Sri H.P. Sudham Das (Nominated) -**

43 (233) Will the Deputy Chief Minister be pleased to state:-

a) the reports have been published by the media that the detailed project reports have been prepared for approximately 20 road transport infrastructure projects including 42 k.m elevated roads and double decker road under the urban comprehensive traffic and reforms plan at the estimation cost of Rs. 54964.00 crores from Bruhat Bengaluru Mahanagara Palike, the information regarding the present condition of all these projects be furnished ;

b) the plan of the Government regarding the required financial arrangement with regard to all these projects ; (information be furnished)

c) whether it has come to the notice of the Government that various adverse effects are being caused instead of intended traffic reforms of the proposed plan of B.B.M.P; the complete information regarding exorbitant and unnecessary burden on citizen due to the years of delay in the commencement of work and the cost of work as it is unable to meet the expected intent ;

d) whether is it cause ineffectivity in the saving of this transport time by causing heavy traffic congestion in the entrance of tunnel and exit areas by reducing the transport time by the tunnel road system ;

e) the prevailing inconvenience for required land acquisition for all these works : whether it has come to the notice of the Government about the opinion expressed by various experts including road traffic expert Sri.Ashish Varma of Indian Educational Institution in the seminar held by the civil society regarding the other important facts ; if so, the details regarding the work plan that has been taken by the Government with regard to the solution of serious effects of the said facts be furnished ?

## PROVIDING GRANT FOR THE WORK OF COURT COMPLEX BUILDING IN BELTHANGADI

**Sri Prathap Simha Nayak K. (Elected by Legislative Assembly) -**

44 (251) Will the Minister for Law, Parliamentary Affairs and Legislation and Tourism be pleased to state:-

a) whether it has come to the notice of the Government that the requisition has been submitted to sanctioning of Rs.13.92 crore for the construction work of the court complex building and supplying furnitures in Belthangadi of Dakshina Kannada district ;

b) if so, the present stage of the process of releasing and sanctioning of the grant according to the requisition ;

c) the timelimit within which the grant of Rs.13.92 crores would be released by sanctioning for the construction work of the said court complex and supplying furnitures ?

## CONSTITUTION OF WATER USERS CO-OPERATIVE SOCIETIES (APEX) UNION

**Sri Madhu G. Madegowda (Graduates' Constituency) -**

45 (215) Will the Deputy Chief Minister be pleased to state:-

a) the present stage of the proposal for the constitution of water users co-operative societies (apex) union ; (details be furnished)

b) the present stage of the proposal which is under contemplation in the Government level with regard to enhancement of Rs.1.00 lakh of annual executive grant and one time maintenance grant which is being provided at present by revising the same for working water users co-operative societies ; (details be furnished)

c) the stand of the Government with regard to providing security deposit for remaining federations on par with the same that has been provided for water users co-operative federations of Harangi, Kabini, Malaprabha and Ghataprabha by the Government ;

d) the order (No:46 CAA 2019, dated:17.08.2019) has been issued by the Government already with regard to the entrusting to the societies of maintenance works which are coming under the limit of water users co-operative societies, there is no clarity that the limit of the amount for which, the rank of the authority by whom the order would be issued ; hence, whether the order would be issued by delegating financial power for various ranks officers in this regard ;

e) whether the Government reconsider its decision once again with regard to entrusting fish farming and fishing in the extent of less than 50 acre of lake, reservoir and tank which are coming in the limit of the corporation for working water users societies/ federations ?

**K.R. MAHALAKSHMI**
Secretary
Karnataka Legislative Council

Govt. Press, Vikasa Soudha Unit, Bengaluru, WD-832/P5